ಸಿವಿಲ್ ಜಡ್ಜ್ ಮತ್ತು ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಗ್ಗಡದೇವನಕೋಟೆ

ಸಿ.ಸಿ.ನಂ. 77/2015

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರಾಜೇಂದ್ರ ಕೆ.ಎಸ್ | ಪಿ.ಡಬ್ಲ್ಯೂ- 3 |
| ತಂದೆಯ ಹೆಸರು | : | ಲೇಟ್ ಕೆ.ಜಿ.ಸಿದ್ದಪ್ಪ | ಸಿ.ಡಬ್ಲ್ಯೂ- 1 |
| ವಯಸ್ಸು | : | 59 ವರ್ಷ | |
| ಉದ್ಯೋಗ | : | ಅಬಕಾರಿ ರಕ್ಷಕರು, ಹುಣಸೂರು ಅಬಕಾರಿ ಉಪಾಧೀಕ್ಷಕರ ಕಛೇರಿ, ಹುಣಸೂರು ಉಪವಿಭಾಗ | ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 25.07.2017 |
| ವಾಸಸ್ಥಳ | : | ಹುಣಸೂರು, ಮೈಸೂರು ಜಿಲ್ಲೆ. | |

ಮುಖ್ಯ ವಿಚಾರಣೆ : ಎಪಿಪಿ ರವರಿಂದಃ

ನಾನು 2005 ಜೂನ್ ರಿಂದ ಇಲ್ಲಿಯವರೆಗೂ ಅಬಕಾರಿ ಉಪಾಧಿಕ್ಷಕರ ಕಛೇರಿ ಹುಣಸೂರು ಉಪವಿಬಾಗದಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ. ದಿಃ 15.01.2009 ರಂದು ರಾತ್ರಿ 9.15 ಗಂಟೆ ಸಮಯದಲ್ಲಿ ಹುಣಸೂರು ಉಪಾಧೀಕ್ಷಕರ ನಿರ್ದೇಶನದಂತೆ ನಾನು, ಚಾಸಾ- 2 ಹಾಗೂ ವಾಹನ ಚಾಲಕ ಪುಟ್ಟರಾಜುರವರು ನಮ್ಮ ಇಲಾಖಾ ಜೀಪ್‌ನಲ್ಲಿ ಹೆಗ್ಗಡದೇವನಕೋಟೆಗೆ ಬಂದು, ಹೆಗ್ಗಡದೇವನಕೋಟೆ ವಲಯದ ಉಪನಿರೀಕ್ಷಕರಾದ ಚಾಸಾ- 7 ಹಾಗೂ ಅಬಕಾರಿ ರಕ್ಷಕರಾದ ಚಾಸಾ- 3 ಮತ್ತು 4 ರವರನ್ನು ಕರೆದುಕೊಂಡು ಹಂಪಾಪುರ ಹೋಬಳಿ, ಕ್ಯಾತನಹಳ್ಳಿ ಪೋಸ್ಟ್ ಗಂಗಂಡ ಹೊಸಹಳ್ಳಿ ಗ್ರಾಮಕ್ಕೆ ಹೋಗಿ ರಾಜು ಎಂಬುವರ ಮನೆಯ ಬಗ್ಗೆ ವಿಚಾರಿಸಿ, ಅವರ ಮನೆಗೆ ಹೋದೆವು. ಅಲ್ಲಿ ಸ್ಥಳೀಯರಿಗೆ ಪ್ರಕರಣದ ವಿದ್ಯಾಮಾನವನ್ನು ತಿಳಿಸಿದಾಗ ಅವರು ಯಾರು ಪಂಚರಾಗಿ ಸಹಕರಿಸಲು ಒಪ್ಪಲಿಲ್ಲ. ಚಾಸಾ- 7 ರವರು ಇಲಾಖಾ ಸಿಬ್ಬಂದಿಗಳನ್ನು ಪಂಚರಾಗಿ ಪರಿಗಣಿಸಿ ನಾವೆಲ್ಲಾ ಹೋಗಿ 1ನೇ ಆರೋಪಿಯ ಮನೆಯ ಬಾಗಿಲನ್ನು ತಟ್ಟಿದಾಗ 1ನೇ ಆರೋಪಿಗೆ ಬಾತ್ಮೀ ವಿಷಯ ತಿಳಿಸಲಾಯಿತು. 1ನೇ ಆರೋಪಿಂದುು ಒಪ್ಪಿದ ಮೇರೆಗೆ ಸ್ಥಳದಲ್ಲಿ ಶೋಧನಾ ವಾರೆಂಟ್‌ನ್ನು ತಯಾರಿಸಿಕೋಂಡು ಮನೆಯನ್ನು ಶೋಧನೆ ಮಾಡಿ ನೋಡಿದಾಗ ಮನೆಯ ಅಕ್ಕಪಕ್ಕದಲ್ಲಿ ಎರಡು ಕೊಠಡಿಗಳು ಇದ್ದವು. ಅದರ ಎಡಭಾಗದ ಕೊಠಡಿಯಲ್ಲಿ ಒಂದು ಪ್ಲಾಸ್ಟಿಕ್ ಚೀಲ ಇರುವುದು ೞಕಂಡುಬಂದಿತ್ತು. ಅದನ್ನು ಲಾಠಿಯಿಂದ ಚುಚ್ಚಿದಾಗ ಅದು ಗಾಜಿನ ಬಾಟಲ್ ಇರುವಂತಹ ಶಬ್ದ ಕೇಳಿ ಬಂದಿತ್ತು. ಅದನ್ನು ಹೊರಗೆ ತೆಗೆದು ನೋಡಲಾಗಿ 180 ಎಂಎಲ್‌ನ ಒಟ್ಟು 50 ಮದ್ಯದ ಬಾಟಲ್‌ಗಳು ಇದ್ದವು. ಅವುಗಳ ಪೈಕಿ ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ 30 ಬಾಟಲ್‌ಗಳು, ನಂಬರ್ ಒನ್ ಹೈವೇ ಡಿಲಕ್ಸ್ ವಿಸ್ಕಿಯ 20 ಬಾಟಲ್‌ಗಳು ಇರುವುದು ಕಂಡುಬಂದಿತ್ತು. 1ನೇ ಆರೋಪಿಯನ್ನು ವಿಚಾರಿಸಿದಾಗ ಕರಿಮುದ್ದನಹಳ್ಳಿ ಗ್ರಾಮದ 2ನೇ ಆರೋಪಿಯು ಮದ್ಯದ ಬಾಟಲ್‌ಗಳನ್ನು ಮಾರಾಟ ಮಾಡಲು ತಂದುಕೊಟ್ಟಿರುವುದಾಗಿ ತಿಳಿಸಿದರು. ಸದರಿ ಮದ್ಯದ ಬಾಟಲ್‌ಗಳನ್ನು ಅಳ್ಳಾಡಿಸಿ ನೋಡಿದಾಗ ಕಲ್ಮಶದಿಂದ ಕೂಡಿರುವುದು ಕಂಡುಬಂದಿತ್ತು. ಸ್ಥಳದಲ್ಲಿ ಸದರಿ ಬಾಟಲ್‌ಗಳ ಮೇಲೆ ಇರುವ ಭದ್ರತಾ ಚೀಟಿಯನ್ನು ಅಲ್ಟ್ರಾವೈಲೈಟ್ ಲ್ಯಾಂಪ್ ಮತ್ತು

ಭೂತಕನ್ನಡಿಯಿಂದ ಪರಿಶೀಲಿಸಿದಾಗ ಅದರಲ್ಲಿ ಇಲಾಖಾ ಗುರುತು ಚಿಹ್ನೆಗಳು ಇರುವುದು ಕಂಡುಬಂದಿರುವುದಿಲ್ಲ. ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ ಲೇಬಲ್ ಮೇಲೆ ಓ.ಸಿ. ಎಂದು ಸಣ್ಣ ಅಕ್ಷರಗಳಲ್ಲಿ ಸಾಮಾನ್ಯವಾಗಿ ಇರುತ್ತದೆ. ಆದರೆ ಆ ಅಕ್ಷರಗಳು 1ನೇ ಆರೋಪಿಯ ಮನೆಯಲ್ಲಿದ್ದ ಬಾಟಲ್‌ಗಳ ಮೇಲೆ ಕಂಡುಬಂದಿರುವುದಿಲ್ಲ. ಆದ್ದರಿಂದ ಸದರಿ ಬಾಟಲ್‌ಗಳಲ್ಲಿ ಇದ್ದ ಮದ್ಯವು ನಕಲಿ ಮದ್ಯ ಎಂದು ತಿಳಿದು ಬಂದಿತ್ತು. ಅದೇ ರೀತಿ ಲೇಬಲ್‌ಗಳು ನಕಲಿ ಎಂದು ತಿಳಿದು ಬಂದಿತ್ತು. 1ನೇ ಆರೋಪಿಯನ್ನು ವಿಚಾರಿಸಿದಾಗ ಆತನ ಬಳಿ ಯಾವುದೇ ರಹದಾರಿ ಇರುವುದಿಲ್ಲ ಎಂದು ಕಂಡುಬಂದಿತು. ಆದ್ದರಿಂದ ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿ ಸದರಿ ಬಾಟಲ್‌ಗಳನ್ನು ಅಮಾನತ್ತುಪಡಿಸಿಕೊಳ್ಳಲಾಯಿತು. ಅವುಗಳ ಪೈಕಿ ಒರಿಜಿನಲ್ ಚಾಯ್ಸ್ ಡಿಲಕ್ ವಿಸ್ಕಿಯ 18 ಬಾಟಲ್‌ಗಳು ಹಾಗೂ ನಂಬರ್ ಒನ್ ಹೈವೇ ವಿಸ್ಕಿಯ 10 ಬಾಟಲ್‌ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದುಕೊಳ್ಳಲಾಯಿತು. ಮಾದರಿ ಬಾಟಲ್‌ಗಳನ್ನು ಬಟ್ಟೆಯಿಂದ ಸುತ್ತಿ ಇಲಾಖಾ ಮೊಹರಿನಿಂದ ಸೀಲ್ ಮಾಡಲಾಯಿತು. ಮಹಜರ್‌ನ್ನು 9.15 ರಿಂದ 10.30 ಗಂಟೆ ಸಮಯದಲ್ಲಿ ಮಾಡಲಾಯಿತು. ಚೀಟಿಗಳನ್ನು ಮಾದರಿ ಬಾಟಲ್‌ಗಳ ಮೇಲೆ ಅಂಟಿಸಲಾಯಿತು. ಸದರಿ ಮಹಜರ್‌ನ್ನು ನೋಡುತ್ತಿದ್ದು, ಅದರಲ್ಲಿ ನನ್ನ ಸಹಿಯನ್ನು ನೋಡಿ ಗುರುತಿಸಿರುತ್ತೇನೆ. ಮಹಜರ್‌ನ್ನು ಈಗಾಗಲೇ ನಿಪಿ- 1 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಡಿ) ಎಂದು ಗುರುತಿಸಲಾಯಿತು. ಆ ದಿನ ಅಮಾನತ್ತುಪಡಿಸಿಕೊಂಡ ಮಾದರಿ ಬಾಟಲ್‌ಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಮುದ್ದೆ ಮಾಲು 1 ರಿಂದ 28 ಎಂದು ಗುರುತಿಸಯಿತು. 1ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಮತ್ತು ಮಾಲು ಸಮೇತ ಹೆಗ್ಗಡದೇವನಕೋಟೆಯ ಅಬಕಾರಿ ವಲಯ ಕಛೇರಿಗೆ ಬಂದಿರುತ್ತೇವೆ.

<u>ಪಾಟೀ ಸವಾಲುಃ 1ನೇ ಆರೋಪಿ ಪರ ಶ್ರೀ ಹೆಚ್.ಕೆ.ಪಿ. ವಕೀಲರಿಂದಃ</u>

ಆ ದಿನ ಉಪಾಧೀಕ್ಷರು ಮಧ್ಯಾಹ್ನ 3.30 ಗಂಟೆ ಸಮಯದಲ್ಲಿ ಹೆಗ್ಗಡದೇವನಕೋಟೆಗೆ ಹೋಗಲು ನಿರ್ದೇಶಿಸಿದರು. ಬಾತ್ಮೀ ಮಾಹಿತಿ ಬಂದ ಬಗ್ಗೆ ಉಪಾಧಿಕ್ಷಕರು ಆ ದಿನ ಮಧ್ಯಾಹ್ನ 3.30 ಗಂಟೆ ಸಮಯದಲ್ಲಿ ತಿಳಿಸಿರುತ್ತಾರೆ. ಆ ದಿನ ಹುಣಸೂರು ಉಪ ವಿಭಾಗದ ಜೀಪ್‌ನಲ್ಲಿ ಚಾಸಾ- 3, 4 ಮತ್ತು 7 ರವರನ್ನು ಕರೆದುಕೊಂಡು ಹೋಗಿರುತ್ತೇವೆ. ಮೊದಲು 1ನೇ ಆರೋಪಿಯ ಮನೆಯ ವಿಳಾಸ ಗೊತ್ತಿರಲಿಲ್ಲ ಎಂದರೆ ಸರಿ. ಮನೆಗೆ ಸಂಬಂಧಿಸಿದ ದಾಖಲಾತಿಗಳನ್ನು ಚಾಸಾ- 7 ರವರು ನನ್ನ ಸಮಕ್ಷಮ ಪಡೆದುಕೊಂಡಿರುವುದಿಲ್ಲ. ಮಹಜರ್‌ನಲ್ಲಿ ಮನೆ ಸಂಖ್ಯೆ ಅಥವಾ ವಿದ್ಯುತ್ ಮೀಟರ್ ಸಂಖ್ಯೆ ನಮೂದಿಸಿರುವುದಿಲ್ಲ ಎಂದರೆ ಸರಿ. ಮಹಜರ್‌ನಲ್ಲಿ ಮನೆಯು ಯಾರಿಗೆ ಸೇರಿದೆ ಎಂದು ನಮೂದಿಸಿರುವುದಿಲ್ಲ ಎಂದರೆ 1ನೇ ಆರೋಪಿಯನ್ನು ವಿಚಾರಿಸಿದಾಗ ಅವರು ಸರಿಯಾಗಿ ಉತ್ತರ ನೀಡಿರಲಿಲ್ಲ. ಆ ದಿನ 1ನೇ ಆರೋಪಿಯು ಮನೆಯಲ್ಲಿ ಅವರು ಒಬ್ಬರೇ ಇದ್ದರೂ. ಚಾಸಾ- 7 ರವರ ಉಕ್ತಲೇಖನದಂತೆ ನಿಪಿ- 1 ರ ಮಹಜರ್‌ನ್ನು ನಾನು ಬರೆದಿರುತ್ತೇನೆ. 2ನೇ ಆರೋಪಿಯ ಬಗ್ಗೆ 1ನೇ ಆರೋಪಿಯು ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ 2ನೇ ಆರೋಪಿಯ ಮನೆಗೆ ಭೇಟಿ ಕೊಡಲು ಪ್ರಯತ್ನಪಟ್ಟಿರುವುದಿಲ್ಲ. ಒರಿಜಿನಲ್ ಚಾಯ್ಸ್ ವಿಸ್ಕಿ ಲೇಬಲ್ ಮೇಲೆ ಟಿ.ಪಿ. ಎಂಬ ಅಕ್ಷರಗಳು ಇರುತ್ತದೆ ಎಂದು ಮಹಜರ್‌ನಲ್ಲಿ

ನಮೂದಿಸಿರುತ್ತೇವೆ. ಆ ಬಗ್ಗೆ ಮಹಜರ್‌ನಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಮಹಜರ್ ಸಮಯದಲ್ಲಿ ಲೇಬಲ್‌ಗಳನ್ನು ಬೇರ್ಪಡಿಸಿರುವುದಿಲ್ಲ. ಆ ದಿನ 50 ಬಾಟಲ್‌ಗಳ ಪೈಕಿ 28 ಬಾಟಲ್‌ಗಳನ್ನು ಮಾತ್ರ ಮಾದರಿಗಾಗಿ ತೆಗೆದುಕೊಳ್ಳಲಾಗಿದೆ ಎಂದರೆ ಸರಿ.

2. ಆ ದಿನ 50 ಬಾಟಲ್‌ಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಮಾದರಿ ಬಾಟಲ್‌ಗಳ ಮೇಲೆ ಚೀಟಿಯಲ್ಲಿಯ ಆರೋಪಿಯ ಸಹಿಯನ್ನು ಪಡೆದುಕೊಂಡಿರುವುದಿಲ್ಲ. ಆ ದಿನ ಮಾದರಿ ಬಾಟಲ್‌ಗಳ ಮೇಲೆ ಇಬ್ಬರು ಸಿಬ್ಬಂದಿಗಳ ಸಹಿಗಳನ್ನು ತೆಗೆದುಕೊಳ್ಳಲಾಗಿದೆ. ಅವರ ಹೆಸರು ಈಗ ನನಗೆ ನೆನಪಿಲ್ಲ. ಮಹಜರ್ ಸಮಯದಲ್ಲಿ ವಾಹನ ಚಾಲಕ ಪುಟ್ಟರಾಜು ಎಂಬುವರು ಇದ್ದರು ಎಂದರೆ ಸರಿ. ನಿಪಿ- 1 ರ ಮಹಜರ್‌ನಲ್ಲಿ ಪುಟ್ಟರಾಜು ಎಂಬುವರು ಸಹಿ ಮಾಡಿರುವುದಿಲ್ಲ ಎಂದರೆ ಸರಿ. ಆರೋಪಿಯು ನನ್ನ ಮುಂದೆ ಸ್ವ ಇಚ್ಛಾ ಹೇಳಿಕೆಯನ್ನು ಕೊಟ್ಟಿರುವುದಿಲ್ಲ ಎಂದರೆ ಸರಿ. 1ನೇ ಆರೋಪಿಯನ್ನು ವಶಕ್ಕೆ ಪಡೆದುಕೊಂಡ ಸಮಯದಿಂದ ನ್ಯಾಯಾಲಯಕ್ಕೆ ಹಾಜರುಪಡಿಸುವ ವರೆಗೂ ನಾನು ಇದ್ದೇ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಆರೋಪಿಯನ್ನು ಹೆಗ್ಗಡದೇವನಕೋಟೆಯ ಅಬಕಾರಿ ವಲಯದ ಸಿಬ್ಬಂದಿಗಳ ಸುಪರ್ದಿಗೆ ಕೊಟ್ಟು ನಾವು ನಮ್ಮ ಕಛೇರಿಗೆ ಹೋಗಿರುತ್ತೇವೆ. ನಾವು ಹೆಗ್ಗಡದೇವನಕೋಟೆ ಕಛೇರಿಗೆ ಬಂದಾಗ ರಾತ್ರಿ 11.30 ಗಂಟೆಯಾಗಿತ್ತು. ನಿಪಿ- 1 ರ ಮಹಜರ್‌ನ್ನು ನಾನು ಕಛೇರಿಯಲ್ಲಿ ಬರೆದಿರುತ್ತೇನೆ ಎಂದರೆ ಸರಿಯಲ್ಲ. ನಿಪಿ- 1 ರ ಮಹಜರ್‌ನ್ನು ಚಾಸಾ- 7 ರವರ ಹೇಳಿಕೆಯಂತೆ ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ನಿಪಿ- 1 ರ ಮಹಜರ್‌ನಲ್ಲಿ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಇಲಾಖಾ ಅಂಕಿ-ಅಂಶಗಳಿಗೋಸ್ಕರ ಸುಳ್ಳು ಮಹಜರ್‌ನ್ನು ಬರೆದಿರುತ್ತೇನೆ ಎಂದರೆ ಸರಿಯಲ್ಲ. 1ನೇ ಆರೋಪಿಯಿಂದ ಯಾವುದೇ ಮದ್ಯದ ಬಾಟಲ್‌ಗಳನ್ನು ವಶಕ್ಕೆ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಒ.,

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹೆಗ್ಗಡದೇವನಕೋಟೆ.